2 ಹಕ್ಕುಚ್ಯುತಿ ಪ್ರಸ್ತಾವ:

ವಿಷಯ: ಅಪ್ಪಚ್ಚು ರಂಜನ್‌ರವರ ಅಧ್ಯಕ್ಷತೆಯ ವಿಶೇಷ ಸದನ ಸಮಿತಿಯ ವರದಿ ಸದನದಲ್ಲಿ ಮಂಡನೆಗೆ ಮುನ್ನವೇ ಮಾಧ್ಯಮಗಳಿಗೆ ಸೋರಿಕೆಯಾಗಿರುವುದು.

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್ [ಸೇಡಂ]: ಈಗ ಮಾನ್ಯ ಅಧ್ಯಕ್ಷರ ಅಪ್ಪಣೆ ಮೇರೆಗೆ ಈ ವಿಷಯವನ್ನು ಪ್ರಸ್ತಾಪಿಸುತ್ತಿದ್ದೇನೆ. ಮಾನ್ಯ ಅಧ್ಯಕ್ಷರೆ, ಮಾನ್ಯ ಅಪ್ಪಚ್ಚು ರಂಜನ್‌ರವರ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ವಿಶೇಷ ಸದನ ಸಮಿತಿ ವರದಿಯನ್ನು ಸದನಕ್ಕೆ ಒಪ್ಪಿಸುವ ಮೊದಲೇ ವರದಿಯಲ್ಲಿನ ಮಾಹಿತಿ ಸೋರಿಕೆಯಾಗಿರುತ್ತದೆ. ಆದುದರಿಂದ ಸದನದ ಹಾಗೂ ಸಮಿತಿಯ ಹಕ್ಕುಚ್ಯುತಿಯಾಗಿದೆ ಮತ್ತು ಗೋಪ್ಯತೆಯನ್ನು ಕಾಪಾಡುವಲ್ಲಿ ವಿಫಲವಾಗಿದೆ. ಆದ್ದರಿಂದ ಈ ವಿಷಯವನ್ನು ಈ ದಿನ ಸದನದಲ್ಲಿ ಪ್ರಸ್ತಾಪಿಸಲು ದಯವಿಟ್ಟು ಅವಕಾಶ ಕಲ್ಪಿಸಿಕೊಡಬೇಕೆಂದು ಕೋರುತ್ತೇನೆ.

(ಗೊಂದಲ)

ಅಧ್ಯಕ್ಷರು: ಅದು ಈಗ ತಾನೇ ನನ್ನ ಕೈಗೆ ಸಿಕ್ಕಿದೆ. ಅದನ್ನು ಏನು ಮಾಡಬೇಕೆಂದು ಪರಿಶೀಲನೆ ಮಾಡುತ್ತೇನೆ. ಇದರ ಬಗ್ಗೆ ತನಿಖೆ ಮಾಡುವುದಾದರೆ ತನಿಖೆ ಇಲ್ಲವೇ ಇದನ್ನು Privilege Committee ಗೆ refer ಮಾಡುವ ಬಗ್ಗೆ ತೀರ್ಮಾನ ಕೈಗೊಳ್ಳುತ್ತೇನೆ.

(ಗೊಂದಲ)

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಇದರ ಸಾರಾಂಶ ಏನಿದೆ ಎಂಬುದನ್ನು ಸದನದ ಗಮನಕ್ಕೆ ಒಂದೆರಡು ನಿಮಿಷ ತರುತ್ತೇನೆ. I will try to convince you.

(ಗೊಂದಲ)

ಶ್ರೀ ಹೆಚ್. ಡಿ. ರೇವಣ್ಣ : ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಟಿ. ವಿ. ಮತ್ತು ಪೇಪರ್‌ಗಳಲ್ಲೆಲ್ಲಾ ಪ್ರಕಟವಾಗಿದೆ. ದಯಮಾಡಿ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಸದನ ಸಮಿತಿಯನ್ನು ನೀವು ರಚಿಸಿದ್ದೀರಿ. ಅವತ್ತು 11ನೇ ತಾರೀಖು.....

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್: ನಮಗೆ ಸದನದ ಬಗ್ಗೆ ಬಹಳ ಗೌರವವಿದೆ. The House should be in order. You please ask the Members to go to their places.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಅದನ್ನು Privilege Committee ಗೆ refer ಮಾಡಿ.

(ಗೊಂದಲ)

MR. SPEAKER: I will examine and refer it.

(ಗೊಂದಲ)

ಅಧ್ಯಕ್ಷರು: 10.55 ಗಂಟೆಗೆ ಈ ಒಂದು .....

(ಗೊಂದಲ)

MR. **SPEAKER** : That is different.

(ಗೊಂದಲ)

ಅಧ್ಯಕ್ಷರು: ಈಗ ತಾನೇ ಇದು ನನಗೆ ಸಿಕ್ಕಿದೆ. ನಾನು ಇದನ್ನು ಪರಿಶೀಲನೆ ಮಾಡಿ, ಏನು ಮಾಡಬೇಕು ಎಂಬುದನ್ನು ತೀರ್ಮಾನ ಮಾಡುತ್ತೇನೆ.

(ಗೊಂದಲ)

ಅಧ್ಯಕ್ಷರು: ಹೀಗಿದ್ದರೆ ಯಾರಿಗೆ ತಾನೇ ಮಾತನಾಡಲು ಅವಕಾಶ ಕೊಡಲಿ?

(ಗೊಂದಲ)

ಶ್ರೀ ಸಿದ್ದರಾಮಯ್ಯ: ನನಗೆ ಮಾತನಾಡಲು ಅವಕಾಶ ಕೊಡುತ್ತೀರಾ?

(ಗೊಂದಲ)

ಅಧ್ಯಕ್ಷರು: ಹೇಳಿ.

(ಗೊಂದಲ)

ಅಧ್ಯಕ್ಷರು: ಈಗ ತಾವು ಪ್ರಸ್ತಾವನೆಯನ್ನು ಮಂಡಿಸಿದ್ದೀರಿ. ನಾನು 10.55 ಗಂಟೆಗೆ ಇದನ್ನು ಗಮನಿಸಿದ್ದೇನೆ. ಇದನ್ನು ನೋಡಿ, ಏನು ಕ್ರಮ ತೆಗೆದುಕೊಳ್ಳಬೇಕೋ, ಅದನ್ನು ತೆಗೆದುಕೊಳ್ಳುತ್ತೇನೆ.

(ಗೊಂದಲ)

ಡಾ: ಶರಣಪ್ರಕಾಶ್ ರುದ್ರಪ್ಪ ಪಾಟೀಲ್ : ಮಾನ್ಯ ಅಧ್ಯಕ್ಷರೆ, ನೀವು ಕ್ರಮ ತೆಗೆದುಕೊಳ್ಳಿ, ಆದರೆ ಇಲ್ಲಿ ಪ್ರಸ್ತಾವನೆ.....

(ಗೊಂದಲ)

ಅಧ್ಯಕ್ಷರು: ತಾವು ಈಗ ಅದನ್ನು ಇಲ್ಲಿ ಪ್ರಸ್ತಾಪಿಸಿದ್ದೀರಿ. I will take appropriate action.

(ಗೊಂದಲ)

MR. SPEAKER : Appropriate action will be taken. ಇದು ಲೀಕ್ ಆಗಿರುವುದಕ್ಕೆ ಕಾರಣಕರ್ತರು ಯಾರು?

(ಗೊಂದಲ)

MR. SPEAKER : Whether it amounts to privilege ಎಂಬ ಬಗ್ಗೆ I will examine and refer the matter to the Privilege Committee. ನಾನು examine ಮಾಡುವುದಕ್ಕೂ ಸಹ ನೀವು ಅವಕಾಶ ಕೊಡದಿದ್ದರೆ ಹೇಗೆ?

ಶ್ರೀ ಸಿದ್ದರಾಮಯ್ಯ : ಈಗ ನನ್ನ ಹೆಸರು ಪ್ರಸ್ತಾಪವಾಗಿದೆ, ಡಿ. ಕೆ. ಶಿವಕುಮಾರ್ ಹೆಸರು ಪ್ರಸ್ತಾಪ ಮಾಡಲಾಗಿದೆ, 15 ಜನ ಶಾಸಕರನ್ನು ಅಮಾನತ್ತು ಮಾಡುತ್ತೇವೆಂದು ಹೇಳಿದ್ದಾರೆ.

(ಗೊಂದಲ)

ಶ್ರೀ ಎಂ. ಟಿ. ಕೃಷ್ಣಪ್ಪ: [ತಮ್ಮ ಸ್ಥಾನದಿಂದ] ಅದಕ್ಕೇನು ಮೌಲ್ಯವಿದೆಯಾ?

ಅಧ್ಯಕ್ಷರು: ಅಲ್ಲಿಂದ ಏಕೆ ಮಾತನಾಡುತ್ತೀರಿ? ಇಲ್ಲಿ ವಿರೋಧ ಪಕ್ಷದ ನಾಯಕರು ಮಾತನಾಡುವಾಗಲೂ ನೀವು ಕುಳಿತುಕೊಳ್ಳಬೇಕೆನ್ನುವ ಸೌಜನ್ಯ ವಾದರೂ ಬೇಕು, ನೀವು ಹೇಳಿದಂತೆ ಇಲ್ಲಿ ಸದನ ನಡೆಸುವುದಕ್ಕಾಗು ವುದಿಲ್ಲ, ಕುಳಿತುಕೊಳ್ಳಿ.

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ನೋಡಿ ಸದನ ಸಮಿತಿ ಮಾಡಿದ್ದೀರಿ, ಅವರು ವಿಚಾರಣೆ ಮಾಡಿ ವರದಿಯನ್ನು ತಮಗೆ ಕೊಡಬೇಕು, ನೀವು ಅದನ್ನು ಸದನದಲ್ಲಿ ಮಂಡಿಸಬೇಕು. ಇಲ್ಲಿ ಸದನದಲ್ಲಿ ಮಂಡಿಸುವುದಕ್ಕೂ ಮುಂಚೆ, ನೀವು ಇಲ್ಲಿ ಬರುವುದಕ್ಕಿಂತ ಮುಂಚೆ ವರದಿ ಲೀಕ್ ಆದರೆ, ಇದು ಬ್ಲಾಕ್ ಮೇಲ್ ಮಾಡುವ ತಂತ್ರವಲ್ಲವೇ? ಹೆದರಿಸತಕ್ಕಂತ ತಂತ್ರವಲ್ಲವೇ? ಆಮೇಲೆ, ನನ್ನ ಹೆಸರೆಲ್ಲಾ ಪ್ರಸ್ತಾಪವಾಗಿದೆ, ಡಿ. ಕೆ. ಶಿವಕುಮಾರ್ ಅವರ ಹೆಸರು ಪ್ರಸ್ತಾಪವಾಗಿದೆ, 15 ಜನ ಶಾಸಕರನ್ನು ಅಮಾನತ್ತು ಮಾಡಲು ಶಿಫಾರಸ್ಸು ಮಾಡಿದ್ದಾರೆಂದು ಹೇಳುತ್ತಾರೆ, ಇದನ್ನು ಯಾರು ಮಾಡಿದರು? ಇದು ನಮ್ಮ ಹಕ್ಕಿಗೆ ಚ್ಯುತಿ ಬಂದಿಲ್ಲವೇ? ಈ ಸದನಕ್ಕೆ ಚ್ಯುತಿಯಾಗುವುದಿಲ್ಲವೇ? ನೀವು ಇನ್ನು ಸದನ ಸಮಿತಿಯನ್ನು ಮಾಡಿದ್ದೀರಿ, ಸಮಿತಿಯು ಸದನಕ್ಕೆ ವರದಿ ಮಾಡಿಲ್ಲ.

(ಗೊಂದಲ)

ಅಧ್ಯಕ್ಷರು: I received the

ಶ್ರೀ ಸಿದ್ದರಾಮಯ್ಯ: ಆದುದರಿಂದ, ದಯವಿಟ್ಟು, ನೋಡಿ ಅದನ್ನು ಸಬ್‌ಮಿಟ್ ಮಾಡುತ್ತೇವೆಂದು ಅಜೆಂಡಾದಲ್ಲಿದೆ, ನೀವು ಮೊದಲೇ ಲೀಕ್ ಮಾಡಿಬಿಟ್ಟು ಇಲ್ಲಿ ಏನು ಸಬ್ ಮಿಟ್ ಮಾಡುತ್ತೀರಿ? ಆದುದರಿಂದ ನಮ್ಮ ಒತ್ತಾಯವೇನೆಂದರೆ, ಇದನ್ನು ಪ್ರಿವಿಲೇಜ್ ಕಮಿಟಿಗೆ ಕಳುಹಿಸಬೇಕು.

(ಗೊಂದಲ)

ಅಧ್ಯಕ್ಷರು: ಆಯಿತು, examine ಮಾಡುವುದಕ್ಕೆ ಕಾಲಾವಕಾಶ ಕೊಡಿ. I will examine it.

ಶ್ರೀ ಸಿದ್ದರಾಮಯ್ಯ: ಅಲ್ಲಿಯವರೆಗೆ ಯಾವುದೇ ವರದಿಯನ್ನು ಇಲ್ಲಿಡಬಾರದು, ದಯವಿಟ್ಟು ಅದನ್ನು ಮುಂದಕ್ಕೆ ಹಾಕಿ.

ಶ್ರೀ ಹೆಚ್. ಡಿ . ರೇವಣ್ಣ : ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ನಾನು ಹೇಳುವುದೇನೆಂದರೆ,

ಅಧ್ಯಕ್ಷರು: I will examine everything. ಆಯಿತು, ನಾನು ಕಾರ್ಯಕ್ರಮದ ಪ್ರಕಾರ ಓದುತ್ತೇನೆ, ಮಾನ್ಯ ರೇವಣ್ಣನವರೆ, ನಿಮ್ಮ ಹೆಸರೇನು ಬಂದಿಲ್ಲ ಕುಳಿತುಕೊಳ್ಳಿ, ನಿಮ್ಮ ಪತ್ರ ಈಗ ನನ್ನ ಗಮನಕ್ಕೆ ಬಂದಿದೆ, ಇದನ್ನು

ಪರಿಶೀಲನೆ ಮಾಡಿ, ಏನು ಮಾಡಬೇಕೋ ಅದನ್ನು ಮಾಡುತ್ತೇನೆ. ಈಗಾಗಲೇ ಹೇಳಲಾಗಿದೆ, ಇದರಲ್ಲೇನು ವಿಶೇಷತೆ ಇಲ್ಲ, ನಿಮ್ಮದೇನು ಸ್ಪೆಷಾಲಿಟಿ ಇಲ್ಲ, both the contents are one and same.

ಶ್ರೀ ಹೆಚ್. ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ಎರಡು ನಿಮಿಷ ಮಾತನಾಡುತ್ತೇನೆ, ನಿನ್ನೆ ಕನ್ನಡಪ್ರಭ, ಎಲೆಕ್ಟ್ರಾನಿಕ್ಸ್ ಮೀಡಿಯದಲ್ಲೆಲ್ಲಾ ಏನೊಂದು ಅಪ್ಪಚ್ಚುರಂಜನ್ ಅವರ ಅಧ್ಯಕ್ಷತೆಯಲ್ಲಿ ಏನು ಸಮಿತಿ ಮಾಡಿದ್ದೀರಿ, 15 ಜನ ಸದಸ್ಯರ ಮೇಲೆ, ವಿರೋಧಪಕ್ಷದ ನಾಯಕರು ಮತ್ತು ಡಿ. ಕೆ. ಶಿವಕುಮಾರ್ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ವರದಿಯಲ್ಲಿ ಶಿಫಾರಸ್ಸು ಮಾಡಲಾಗಿದೆ ಎಂದು ನಿನ್ನೆ ಕನ್ನಡಪ್ರಭ ಮುಖ ಪುಟದಲ್ಲಿ ಬಂದಿದೆ, ಎಲೆಕ್ಟ್ರಾನಿಕ್ ಮೀಡಿಯದಲ್ಲೆಲ್ಲಾ ಬಂದಿದೆ, ಮತ್ತು ಸದನ ಸಮಿತಿ ಮಾಡುವುದಕ್ಕೆ ಸದನವಿಲ್ಲದೇ ಹೋದಾಗ, ಅವಕಾಶ ತಮಗಿದೆಯೇ ಎಂಬುದನ್ನು ಕೂಡ ಹೇಳಬೇಕು. ಏಕೆಂದರೆ, ಇವತ್ತು ಅದನ್ನು ಮಂಡನೆ ಬೇರೆ ಮಾಡಿದ್ದೀರಿ, ಒಂದು ಕಡೆ ವರದಿ ಲೀಕ್ ಔಟ್ ಆಗಿದೆ, ಇನ್ನೊಂದು ಕಡೆ ಇವತ್ತು ಮಂಡನೆ ಮಾಡಿದ್ದೀರಿ, ಇನ್ನೊಂದು ಕಡೆ ಸದನ ಸಮಿತಿ ಮಾಡುವುದಕ್ಕೆ ನಿಮಗೆ ನೈತಿಕತೆ ಯಾವ ರೀತಿ ಇದೆ? ಏಕೆಂದರೆ, ಸದನದೊಳಗೆ ಮಾಡಬೇಕಾಗುತ್ತದೆ.

(ಗೊಂದಲ)

ಅಧ್ಯಕ್ಷರು: ನೀವು ನೈತಿಕತೆ, ಇನ್ನೊಂದರ ಬಗ್ಗೆ ಮಾತನಾಡಬೇಡಿ,.. How can you question I say?

(ಗೊಂದಲ)

ಶ್ರೀ ಹೆಚ್. ಡಿ. ರೇವಣ್ಣ: ಸಮಿತಿ ಮಾಡುವಾಗ ವಿರೋಧ ಪಕ್ಷದವರನ್ನು ಕೇಳಿದ್ದೀರಾ?

(ಗೊಂದಲ)

ಅಧ್ಯಕ್ಷರು: That is different issue. ಕಮಿಟಿ ಮಾಡುವುದನ್ನೇ ಪ್ರಶ್ನೆ ಮಾಡುವುದಕ್ಕಾಗುವುದಿಲ್ಲ, ಇದನ್ನು ರೆಫರ್ ಮಾಡುವುದಕ್ಕೆ ಪರಿಶೀಲನೆ ಮಾಡುವ ಬಗ್ಗೆ ನಾನು ನಿರ್ಣಯ ತೆಗೆದುಕೊಳ್ಳುತ್ತೇನೆ, ಅವರು ನೈತಿಕತೆ ಇಲ್ಲವೆಂದರೇ? ವಿರೋಧ ಪಕ್ಷದ ನಾಯಕರೆ, ಈಗ ಅವರು ಆ ಶಬ್ದವನ್ನು

ಬಳಕೆ ಮಾಡಬಹುದಾ? ನೈತಿಕತೆ ಇಲ್ಲ ಎಂಬ ಶಬ್ದವನ್ನು ಪ್ರಯೋಗ.... can he use that word?

(ಗೊಂದಲ)

ಮಾನ್ಯ ಸದಸ್ಯರೊಬ್ಬರು: ಅವರು ಕ್ಷಮೆ ಕೇಳಬೇಕು.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ವಿಧಾನಸೌಧದ ಸುತ್ತಾ ಇಷ್ಟೊಂದು ಪೊಲೀಸಿನವರ ಕಾವಲನ್ನು ಹಾಕಿಸಿದ್ದಿರೇಕೆ? ಏನು ನಾವೇನು ಟೆರರಿಸ್ಟಾ? ಏನು ಸಾವಿರಾರು ಪೊಲೀಸಿನವರು ವಿಧಾನಸೌಧದ ಸುತ್ತ ಸುತ್ತುತ್ತಿದ್ದಾರೆ, ಬಾಂಬ್ ಬೆದರಿಕೆಗಳೇನಾದರೂ ಇದೆಯಾ ಇಲ್ಲಿ? ತುರ್ತು ಪರಸ್ಥಿತಿಯಲ್ಲೂ ಕೂಡ ನಾನು ಇಷ್ಟೊಂದು ಪೊಲೀಸರನ್ನು ಕಂಡಿರಲಿಲ್ಲ.

ಅಧ್ಯಕ್ಷರು: ವಿಧಾನಸೌಧದ ಹೊರಗಿನದು ನನ್ನ ವ್ಯಾಪ್ತಿಗೆ ಬರುವುದಿಲ್ಲ, ಹೊರಗಡೆಯದನ್ನು ನಾನು ಕೇಳುವ ಹಾಗಿಲ್ಲ.... you ask the Government.

(ಗೊಂದಲ)

ಶ್ರೀ ಸಿದ್ದರಾಮಯ್ಯ: ನೂರಾರು, ಸಾವಿರಾರು ಪೊಲೀಸಿನವರು ವಿಧಾನ ಸೌಧದ ಸುತ್ತಮುತ್ತ ಇದ್ದಾರೆ, ಇವತ್ತು ನಮಗೆ ತುರ್ತು ಪರಿಸ್ಥಿತಿ ಜ್ಞಾಪಕಕ್ಕೆ ಬರುತ್ತಿದೆ, ಅಘೋಷಿತ ತುರ್ತು ಪರಿಸ್ಥಿತಿಯನ್ನು ಹೇರಲಾಗಿದೆ, ಇಲ್ಲಿ ಯಾರಾದರೂ ಭಯೋತ್ಪಾದಕರಿದ್ದಾರೆಯೇ ಅಥವಾ ಭಯೋತ್ಪಾದಕರ ಭಯವಿದೆಯಾ ಎಂಬುದನ್ನು ಸದನಕ್ಕೆ ತಿಳಿಸಬೇಕು. ಏಕೆ ಪೊಲೀಸಿನವರಿದ್ದಾರೆ? ಇದೇನು ಪ್ರಜಾಪ್ರಭುತ್ವವೇ? ಇದು ಪ್ರಜಾಪ್ರಭುತ್ವದ ನಡವಳಿಕೆಯೇ? ನಮ್ಮ ಕಾರನ್ನು ಚೆಕ್ ಮಾಡಿ ನಾವು ಒಳಗಡೆ ಬರುವುದಕ್ಕೆ ಅರ್ಧಗಂಟೆಯಾಗುತ್ತದೆ, ಇಲ್ಲಿ ಪೊಲೀಸ್ ರಾಜ್ಯವಾಗಿದೆ. ದಯಮಾಡಿ ನೀವು ಅಜೆಂಡಾವನ್ನು ಕೈಗೆತ್ತಿಕೊಳ್ಳುವುದಕ್ಕೆ ಮುಂಚಿತವಾಗಿ ನೀವು ನಮಗೆ ನಿಯಮ 60ರ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಲಿಲ್ಲ. ನಾವು ಸದನದ ಬಾವಿಯಲ್ಲಿದ್ದು ಧರಣಿ ಮಾಡುತ್ತಿರುವಾಗ ಬಿಲ್‌ಗಳನ್ನೆಲ್ಲಾ ಪಾಸ್ ಮಾಡಿಕೊಳ್ಳುತ್ತಿದ್ದಿರಿ, ಇದನ್ನು ಪ್ರಜಾಪ್ರಭುತ್ವವೆಂದು ಕರೆಯಬೇಕಾ? ಸಂಸದೀಯ ನಡವಳಿಕೆ ಎಂದು ಕರೆಯಬೇಕಾ? ಪ್ರಜಾಪ್ರಭುತ್ವದ ಕಗ್ಗೊಲೆಯಲ್ಲವೇ? ಸಂಸದೀಯ ವ್ಯವಸ್ಥೆಗೆ ಇದೊಂದು ದೊಡ್ಡ ಅಗೌರವವಲ್ಲವೇ? ಮಾರಕವಲ್ಲವೇ?